ಹಾಸನ ಜಿಲ್ಲೆಯಲ್ಲಿ ಪಶು ಚಿಕಿತ್ಸಾಲಯಗಳನ್ನು ತೆರೆಯುವುದು

309 - ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹಾಸನ ಜಿಲ್ಲೆಯಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಸರ್ಕಾರದ ತೀರ್ಮಾನಿಸಿದೆಯೇ?*

ಆ) *ಹಾಗಿದ್ದಲ್ಲಿ ಎಷ್ಟು ಪಶುಚಿಕಿತ್ಸಾಲಯಗಳನ್ನು ಎಲ್ಲೆಲ್ಲಿ ತೆರೆಯಲಾಗುವುದು? (ವಿವರ ನೀಡುವುದು)*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು.

ಆ) ನಾಲ್ಕು 1) ಗುಂಜೇವು - ಹೊಳೇನರಸೀಪುರ ತಾ:

2) ರಾಗಿ - ಅರಕಲಗೂಡು ತಾ : ಮರೂರು

3) ಕೆರಗೋಡು - ಅರಕಲಗೂಡು ತಾ:

4) ಸಂಕೇನಹಳ್ಳಿ - ಬೇಲೂರು ತಾ:

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ ಹಾಸನ ಜಿಲ್ಲೆಯಲ್ಲಿ ಒಟ್ಟು ಹೊಸದಾಗಿ 4 ಆಸ್ಪತ್ರೆಗಳನ್ನು ತೆರೆಯುತ್ತಿದ್ದೇವೆ ಎಂದು ಹೇಳಿದ್ದಾರೆ. ಹಾಲಿ ಜಿಲ್ಲೆಯಲ್ಲಿ ಈಗ ಎಷ್ಟು ಆಸ್ಪತ್ರೆಗಳು ಇವೆ. ಹೊಸದಾಗಿ ಇವರು ಆಸ್ಪತ್ರೆಯನ್ನು ತೆರೆಯಲು ಅನುಸರಿಸತಕ್ಕಂಥಾ ಕ್ರಮ ಏನು? ಈಗ ಇರತಕ್ಕಂಥ ಆಸ್ಪತ್ರೆಗಳಲ್ಲಿ ಸಿಬ್ಬಂದಿ, ಔಷಧಿ ಎಲ್ಲಾ ವ್ಯವಸ್ಥೆ ಸರಿಯಾಗಿದೆಯೇ? ಮಾನ್ಯ ಅಧ್ಯಕ್ಷರೇ, ನಾನು ಮೇಲ್ಮನೆಯ ಸದಸ್ಯನಾಗಿದ್ದಾಗ ಸಾರ್ವಜನಿಕರಿಂದ ವಂತಿಗೆಯನ್ನು ಪಡೆದು ಒಂದು ಅತ್ಯಂತ ಉತ್ತಮವಾದ ಕಟ್ಟಡವನ್ನು ಕಟ್ಟಿಸಿಕೊಟ್ಟೆ. ಅಲ್ಲಿ ಆಸ್ಪತ್ರೆಯನ್ನು ತೆರೆಯಲಾಯಿತು. ವೈದ್ಯರನ್ನು ನೇಮಕ ಮಾಡಲಾಯಿತು. ಅಲ್ಲಿಗೆ ಎಕ್ವೀಪ್‌ಮೆಂಟ್ಸ್ ಕೊಟ್ಟರು, ಔಷಧಿ ಕೊಟ್ಟರು. ನಾಲ್ಕಾರು ತಿಂಗಳು ಆಸ್ಪತ್ರೆಯನ್ನು ನಡೆಸಿ ನಂತರ ಅದನ್ನು ಮುಚ್ಚಲಾಯಿತು. ಸುಮಾರು 8-10 ವರ್ಷಗಳು ಆಯಿತು. ಮಾನ್ಯ ಬಚ್ಚೇಗೌಡರು ಮಂತ್ರಿಗಳಾದರು. ಮಾನ್ಯ ನಾಗೇಗೌಡರು ಮಂತ್ರಿಗಳಾಗಿದ್ದರು. ಈಗ ಮಾನ್ಯ ನಿಂಗಯ್ಯನವರು ಮಂತ್ರಿಗಳಾಗಿದ್ದಾರೆ ನಾನು ಅಂದಿನಿಂದ ಇಂದಿನವರೆಗೂ ಕೇಳುತ್ತಿದ್ದೇನೆ ಆಸ್ಪತ್ರೆಯನ್ನು ತೆರೆಯಲಿಲ್ಲ, ಕಾರಣ ಗೊತ್ತಾಗಲಿಲ್ಲ. ಸಾರ್ವಜನಿಕ ವಂತಿಗೆ ಪಡೆದು ಕಟ್ಟಿಸಿರತಕ್ಕಂಥ ಆ ಕಟ್ಟಡ ಇಡೀ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ಕಟ್ಟಡ. ಇವತ್ತು ವಿಶೇಷ ಏನೆಂದರೆ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ರಿಪೇರಿಗೋಸ್ಕರ ಗ್ಯಾಂಗ್‌ಮೆನ್ ಎನ್ನುವವರು ಇದ್ದರೆ, ಅವರನ್ನು ಅಲ್ಲಿಂದ ವಿತ್‌ಡ್ರಾ ಮಾಡಿ ವೆಟರಿನರಿ ಆಸ್ಪತ್ರೆಗೆ ನೇಮಕ ಮಾಡುತ್ತಿದ್ದಾರೆ. ಏತಕ್ಕೆ ಅನ್ನುವುದು ಗೊತ್ತಿಲ್ಲ. ಬಹಳ ಒತ್ತಡದ ನಂತರ ಮಾನ್ಯ ಲಿಂಗಯ್ಯನವರು ಲೋಕೋಪಯೋಗಿ ಇಲಾಖೆಯಿಂದ ಬಂದು ಒಬ್ಬ ಗ್ಯಾಂಗ್‌ಮೆನ್ ಅನ್ನು

ಅಲ್ಲಿ ಬಾಗಿಲು ತೆರೆಯಲು ಹಾಕಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ, ಈ ಆಸ್ಪತ್ರೆಯನ್ನು ಈಗಲಾದರೂ ತೆಗೆಯುವುದಕ್ಕೆ ಇಚ್ಛಿಪಡುತ್ತೀರೋ ಇಲ್ಲವೋ? ಈ ರೀತಿ ಆದರೆ ಸಾರ್ವಜನಿಕರಿಂದ ವಂತಿಗೆ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು. ಈ ಆಸ್ಪತ್ರೆಯನ್ನು ಅವರು ಆದಷ್ಟು ಬೇಗ ತೆರೆಯಬೇಕು.

ಶ್ರೀ ಬಿ. ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೇ, ಅವರು 4 ಆಸ್ಪತ್ರೆಗಳು ಅಂತ ಹೇಳಿದರು 8 ಆಸ್ಪತ್ರೆಗಳನ್ನು ಹಾಸನ ಜಿಲ್ಲೆಗೆ ಕೊಟ್ಟಿದ್ದೇವೆ. ಅವರ ಕ್ಷೇತ್ರದಲ್ಲಿ ಹೆಂಚೂರಿನಲ್ಲಿ ಕೂಡ ಒಂದನ್ನು ಕೊಟ್ಟಿದ್ದೇವೆ. ಇನ್ನು ತಾವು ಕೇಳಿರತಕ್ಕಂಥ ಮಾಹಿತಿ ನನ್ನ ಹತ್ತಿರ ಸದ್ಯದಲ್ಲಿ ಇಲ್ಲ, ನಂತರ ನಾನು ಒದಗಿಸಿಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 4 ಕೋಟಿ 6 ಲಕ್ಷ ಜಾನುವಾರುಗಳು ಇವೆ. ಅವುಗಳಿಗೆ 3070 ಆಸ್ಪತ್ರೆಗಳು ಇರಬೇಕಾಗಿತ್ತು. ಈಗಾಗಲೇ ನಾವು 200 ಆಸ್ಪತ್ರೆಗಳನ್ನು ಕೊಟ್ಟು ಕಂಡೀಷನ್ಸ್ ಫುಲ್‌ಫಿಲ್ ಮಾಡುತ್ತಿದ್ದೇವೆ. ಇಲ್ಲಿ ಇರುವ ಕಟ್ಟಡದ ಉಪಯೋಗ ಆಗುತ್ತಿಲ್ಲ ಎಂದು ಹೇಳಿದ್ದೀರಿ ಅದಕ್ಕೆ ಡಾಕ್ಟರ್ಸ್ ಮತ್ತು ಸಪೋರ್ಟಿಂಗ್ ಸ್ಟ್ಯಾಪ್ ನೇಮಕಾತಿ ಆಗುತ್ತವೆ. ತಕ್ಷಣ ಅಲ್ಲಿಗೆ ಮಂಜೂರಾತಿ ಮಾಡಿ ಕೊಟ್ಟು ಕೆಲಸ ಮಾಡುತ್ತೇವೆ.

ಅಧ್ಯಕ್ಷರು : ಒಂದು ತಿಂಗಳೊಳಗಾಗಿ ಮಾಡಿ.

ಶ್ರೀ ಬಿ.ಬಿ. ನಿಂಗಯ್ಯ : ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆ

311 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡ ಬೈಪಾಸ್ ರಸ್ತೆ ನಿರ್ಮಾಣ ಕಾರ್ಯದ ಸಲುವಾಗಿ ಹಣ ಮಂಜೂರು ಮಾಡಲು ಕೇಂದ್ರ ಸರ್ಕಾರವು ಒಪ್ಪಿದೆಯೇ?

ಆ) ಒಪ್ಪಿದಲ್ಲಿ ಎಷ್ಟು ಹಣ ಮಂಜೂರು ಮಾಡಲು ಒಪ್ಪಿದೆ? ಸದರಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಇ) ಸದರಿ ಬೈಪಾಸ್ ರಸ್ತೆಯ ನಿರ್ಮಾಣ ಕೆಲಸವನ್ನು ಯಾವ ಕಂಪನಿಗೆ ವಹಿಸಲಾಗಿದೆ? ಯಾವ ಕರಾರುಗಳ ಮೇಲೆ ಕೆಲಸ ವಹಿಸಲಾಗಿದೆ? (ವಿವರ ಒದಗಿಸುವುದು)

ಈ) ಸದರಿ ರಸ್ತೆ ನಿರ್ಮಾಣ ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು, ಮತ್ತು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರಥಮ ಹಂತದ ಕಾಮಗಾರಿಗೆ ಮಾತ್ರ ಕೇಂದ್ರ ಸರ್ಕಾರವು ಹಣ ಬಿಡುಗಡೆ ಮಾಡಿದ್ದು, ಇಡೀ ಹೊರ ರಸ್ತೆ ಕಾಮಗಾರಿಗಳನ್ನು ಬಿ.ಒ.ಟಿ. ಆಧಾರದ ಮೇಲೆ ಕೈಗೊಳ್ಳಲು ಪ್ರಸ್ತಾಪಿಸಿದೆ.